INDIAN JOURNAL OF HISTORY AND ARCHAEOLOGY
ISSN (e):2582-225X
Vol-4, Issue -3, September-October, 2022,
PageNo,40-47
Peer Reviewed Journal, Referred Journal

# ಕುವೆಂಪು ನಾಟಕಗಳಲ್ಲಿ ವೈಚಾರಿಕತೆ

**ಡಾ.ನಯನ.**[1]

ಕುವೆಂಪು ಅವರು ನಮ್ಮ ಕನ್ನಡ ನಾಡುಕಂಡ ಮೇರುಕವಿ. ರಾಷ್ಟ್ರಕವಿ, ರಸಋಷಿ, ಅವರ ಸಮಷ್ಠಿ ಸಾಹಿತ್ಯದಲ್ಲಿ ದಟ್ಟ ಅನುಭವಗಳು, ಒಳ ವಿವರಗಳು, ತಾತ್ತ್ವಿಕ ಸಂದೇಶಗಳು ಅಡಕವಾಗಿದೆ. ಅವರ ಪ್ರಖರ ಸಾಹಿತ್ಯ ರಚನೆಯಲ್ಲಿ ಶಾಸ್ತ್ರ ಮತ್ತು ತತ್ತ್ವಗಳೆರಡರ ದಟ್ಟಛಾಯೆಯೇ ಇದೆ. ಸಾಹಿತ್ಯದೊಳಗೆ ಅದ್ವಿತೀಯ ಸಿದ್ಧಿಯನ್ನು ಹೊಂದಿದ್ದಾರೆ. ಎಲ್ಲಾ ಸಾಹಿತ್ಯ ಪ್ರಕಾರಗಳಲ್ಲೂ ತಮ್ಮ ಛಾಪನ್ನು ಮೂಡಿಸಿದ್ದಾರೆ. ಆದರೆ ತನ್ನನ್ನು ತಾನೇ ಕವಿ ಎಂದು ಕರೆದುಕೊಂಡಿದ್ದಾರೆ. ಕಾರಣ ಕುವೆಂಪು ಅವರ ಪ್ರಧಾನ ಆಸಕ್ತಿ ಮತ್ತು ಪ್ರಥಮ ಪ್ರಾಶಸ್ತ್ಯ ಕಾವ್ಯ ಪ್ರಕಾರಕ್ಕೆ ಸಲ್ಲುತ್ತದೆ. ಇನ್ನುಳಿದಂತೆ ಕಾದಂಬರಿ ಮತ್ತು ನಾಟಕಗಳನ್ನು ರಚಿಸಿದ್ದಾರಾದರೂ ಕುವೆಂಪು ಅವರು ತಮ್ಮನ್ನು ತಾವು ಕವಿ ಎಂದು ಕರೆದು ಕೊಳ್ಳುವುದರೊಟ್ಟಿಗೆ ಕಾವ್ಯ ಕ್ಷೇತ್ರಕ್ಕೆ ಎಲ್ಲಿಲ್ಲದ ಮಹತ್ವವನ್ನು ಕೊಡುತ್ತಾರೆ. ಜೊತೆಗೆ ಅವರು ಏನೇ ಬರೆದರು ಅವರ ಕಾವ್ಯತ್ತ್ವ ಮತ್ತು ಕಾವ್ಯತತ್ವ ಸಮೀಕರಣಗೊಂಡಿರುತ್ತದೆ. ಕಾವ್ಯತ್ತ್ವ ಎಂದರೆ ಕಾವ್ಯಾಂಶ, ಕಾವ್ಯತತ್ತ್ವ ಎಂದರೆ ಮೀಮಾಂಸೆಯ ಮಜಲುಗಳು. ಅವರು ನಾಟಕವನ್ನೆ ಬರೆದರೂ ಕಾದಂಬರಿ ಬರೆದರೂ ಮಹಾಕಾವ್ಯವನ್ನೇ ಬರೆದರೂ ಅದರೊಳಗಡೆ ಕಾವ್ಯಾಂಶವಿದೆ. ಹಾಗಾಗಿ ಕವಿ ತಮ್ಮನ್ನು ತಾವು, 'ನನ್ನನ್ನು ಕವಿಯನ್ನಾಗಿ ನೋಡಿ' ಎಂದು ಒತ್ತಾಯಿಸುತ್ತಾರೆ. ಇನ್ನು ಅವರ ನಾಟಕಗಳಲ್ಲಂತು ಕಾವ್ಯಾಂಶ ದಟ್ಟವಾಗಿ ಮತ್ತು ಹೇರಳವಾಗಿ ಸಿಗುತ್ತದೆ. ಹಾಗಾಗಿ ಕುವೆಂಪು ಅವರ ಸಾಹಿತ್ಯ ಎಲ್ಲಾ ರೀತಿಯ ಅಧ್ಯಯನಕ್ಕೂ ತೆರೆದು ಕೊಳ್ಳುವ ಅಪಾರವಾದ ಸಾಧ್ಯತೆಗಳನ್ನು ತನ್ನೊಳಗೆ ಹುದುಗಿಸಿಟ್ಟುಕೊಂಡಿದೆ. ಈ ಹಿನ್ನೆಲೆಯಲ್ಲಿ ಪ್ರಸುತ ಲೇಖನದಲ್ಲಿ ಕುವೆಂಪು ಅವರ ನಾಟಕಗಳಲ್ಲಿ ವೈಚಾರಿಕತೆಯನ್ನು ಈ ಮುಂದಿನಂತೆ ಸ್ಥೂಲವಾಗಿ ವಿವರಿಸುವ ಮೂಲಕ ವಿಶ್ಲೇಷಿಸಲಾಗಿದೆ.

## ಕುವೆಂಪು ಅವರ ಸಾಹಿತ್ಯ ತತ್ತ್ವ

ಕುವೆಂಪು ಅವರು ಸುಮ್ಮನೆ ಬರೆದವರಲ್ಲ. ಅವರು ಏನೇ ಬರೆದರು ತಾವು ನಂಬಿಕೊಂಡು ಬಂದಿರುವ, ಪ್ರಬಲವಾಗಿ ಪ್ರತಿಪಾದಿಸುವ ತತ್ತ್ವಗಳನ್ನು ಪ್ರಸಾರ ಮಾಡುವುದಕ್ಕೋಸ್ಕರ ಬರೆದಂತಹ ಒಬ್ಬ ತತ್ತ್ವಾನ್ವೇಷಕರು. ಉದಾಹರಣೆಗೆ ಪೂರ್ಣದೃಷ್ಟಿ. ಕುವೆಂಪು ಏನೇ ಬರೆದರು ಅದನ್ನು ಖಂಡಿತುಂಡವಾಗಿ

[1].**ಅತಿಥಿ ಉಪನ್ಯಾಸಕಿ, ಯುವರಾಜ ಕಾಲೇಜು ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು**

ನೋಡದೆ ಸಮಗ್ರವಾಗಿ ನೋಡುವುದಕ್ಕೆ ಬಯಸುತ್ತಾರೆ. ಯಾವುದೇ ಒಂದು ಪಾತ್ರದ ಎಲ್ಲಾ ಮಜಲುಗಳನ್ನು ಆಯೋಜಿತವಾಗಿ ತರುತ್ತಾರೆ ಮತ್ತು ಗಾಂಧೀಜಿ ಅವರ ಸರ್ವೋದಯದ ತತ್ತ್ವವನ್ನು ತರುತ್ತಾರೆ. ಪಂಚಮಂತ್ರಗಳನ್ನು ಕೂಡ ತರುತ್ತಾರೆ. ಒಂದು ಪುಟ್ಟಕವಿತೆಯೇ ಆಗಿರಲಿ ಅದರೊಳಗೆ ಮನುಷ್ಯ ನಿಸರ್ಗದ ಶಿಶು ಎನ್ನುವುದನ್ನು ಪ್ರತಿಪಾದಿಸುತ್ತಾರೆ. ಮನುಷ್ಯ ಕೇಂದ್ರಿತ ಚಿಂತನೆ ಕುವೆಂಪು ಅವರಲ್ಲಿ ಪ್ರಧಾನವಾಗಿ ಕಂಡುಬರುವ ಅಂಶ. ಹೀಗಾಗಿ ಕುವೆಂಪು ಅವರ ವೈಚಾರಿಕತೆಯನ್ನು ರೂಪಿಸಿರುವ ಪ್ರಮುಖ ವಿಚಾರಗಳಲ್ಲಿ ಪ್ರಕೃತಿ ಪ್ರಧಾನ ಸ್ಥಾನವನ್ನು ಪಡೆಯುತ್ತದೆ. ಅವರು ಪ್ರಕೃತಿ ಅಥವಾ ನಿಸರ್ಗವನ್ನು ನೋಡುವ ದೃಷ್ಟಿಯಲ್ಲೇ ಸಮಗ್ರತೆ ಇದೆ. ವಿವರಣೆಗಳಿಗಾಗಿ ಕುವೆಂಪು ಅವರು ನಿಸರ್ಗವನ್ನು ನೋಡುವ ದೃಷ್ಟಿಯಲ್ಲೇ ಸಮಗ್ರತೆ ಇದೆ. ವಿವರಿಸುವುದಕ್ಕೋಸ್ಕರವೇ ನಿಸರ್ಗವನ್ನು ತರುತ್ತಾರೆ. ಅವರ ಪ್ರಾರಂಭದ ಕವನ ಸಂಕಲನಗಳಿಂದ ಹಿಡಿದು ಕೊನೆಯಲ್ಲಿ ಬರೆದ ಮಹಾಕಾವ್ಯಗಳವರೆಗೂ ಕುವೆಂಪು ಅವರತತ್ತ್ವ ಅರುಳುತ್ತಾ ವಿಕಾಸವಾಗುತ್ತಾ ಹೋಗಿದೆ. ಹಾಗಾಗಿ ಕುವೆಂಪು ಅವರ ಸಾಹಿತ್ಯತತ್ತ್ವ ನಿಸರ್ಗದಿಂದ ನಿರ್ಮಿತವಾದುದ್ದು. ನಿಸರ್ಗಾನುಸಾರಿಯಾದದ್ದು. ದೈವವನ್ನೇ ಆಗಲಿ, ಧರ್ಮವನ್ನಾಗಲೀ, ಮಿಶ್ರವನ್ನಾಗಲೀ, ಕಾಡನ್ನಾಗಲೀ, ನೀರನ್ನಾಗಲೀ, ಮನುಷ್ಯವನ್ನಾಗಲೀ, ಮನುಷ್ಯ ಸಂವೇದನೆಯನ್ನೇ ಆಗಲಿ ನಿಸರ್ಗದ ಹಿನ್ನೆಲೆಯಿಂದ ಗ್ರಹಿದುವುದಕ್ಕೆ ಪ್ರಯತ್ನ ಪಟ್ಟು ಯಶಸ್ವಿಯಾಗುತ್ತಾರೆ. ಅಂದರೆ ಅದುವರೆಗೂ ಕುವೆಂಪು ಅವರು ಬರುವ ತನಕ ಕನ್ನಡ ಸಾಹಿತ್ಯದಲ್ಲಿ ನಿಸರ್ಗವಿತ್ತೇ ವಿನಃ ನಿಸರ್ಗ ಕೇಂದ್ರಿತ ಸಾಹಿತ್ಯವಿರಲಿಲ್ಲ. ಯಾರು ಅಮುಖ್ಯರಲ್ಲ ಎನ್ನುವ ಸಿದ್ಧಾಂತವನ್ನು ತಮ್ಮ ಪ್ರತಿಯೊಂದು ಕೃತಿಯಲ್ಲೂ ಸಾಬೀತು ಮಾಡುವುದಕ್ಕೋಸ್ಕರವೇ ಬರೆಯುತ್ತಿದ್ದಾರೆನೋ ಎನ್ನುವಷ್ಟರ ಮಟ್ಟಿಗೆ ಅವರತತ್ತ್ವ ರೂಪಿತವಾಗಿದೆ ಮತ್ತು ಮೊಳಕೆಯೊಡೆದಿದೆ.

ಕುವೆಂಪು ಅವರು 'ಕ್ರಿಸ್ತನಲ್ಲ ಪಾದ್ರಿಯ ಮಗಳು' ಎಂಬ ಕಥೆಯನ್ನು ಬರೆದಾಗಲು ಕಾಡಿನ ಗೊಲ್ಲನು ನಾನು ಕೊಳಲುದುವುದು ಎಂಬ ಪುಟ್ಟ ಪದ್ಯ ಬರೆದಾಗಲೂ, 'ಚಂದ್ರನೇತಕೆ ಓಡುವನು ಮೋಡಕೆ ಬೆದರಿಹನೇನು' ಎಂಬ ಶಿಶುಪ್ರಾಸ ಬರೆದಾಗಲೂ ನಿಸರ್ಗ ಒಂದಲ್ಲ ಒಂದು ವಿಧದಲ್ಲಿ ಬಂದೇ ಬರುತ್ತದೆ. ಒಂದು ನೇರವಾಗಿ ಮತ್ತೊಂದು ಮಾನವ ಪ್ರಕೃತಿಯಾಗಿ ಬರುತ್ತದೆ. ಪ್ರಕೃತಿ ಬೇರೆ, ಮಾನವ ಪ್ರಕೃತಿ ಬೇರೆ, ಪ್ರಕೃತಿ ಎಂದರೆ ನಾನು ನೋಡುವ ದೃಷ್ಠಿ, ಮಾನವ ಪ್ರಕೃತಿ ಎಂದರೆ ನನ್ನೊಳಗೆ ನಿಸರ್ಗರೂಪಿತಗೊಂಡಿರುವ ದೃಷ್ಟಿ. ಕುವೆಂಪು ಮಾನವ ಸ್ವಭಾವವನ್ನು ಹೇಳುವಾಗ ಮಾನವ ಪ್ರಕೃತಿಯನ್ನು ವಿವರಿಸುತ್ತಾ ಹೋಗುತ್ತಾರೆ. ಹಾಗಾಗಿ ಅವರು ಬರೆದ ಎಲ್ಲಾ ನಾಟಕ, ಕಥೆ, ಕಾದಂಬರಿಗಳಲ್ಲಿ ನಿಸರ್ಗವೇ ಪ್ರಧಾನ ಪಾತ್ರವನ್ನು ವಹಿಸಿಕೊಂಡಿದೆ. ಹಾಗೇ ನೋಡಿದರೆ ಕುವೆಂಪು ಅವರು ಒಂದನ್ನೇ ಬೇರೆ ಬೇರೆ ರೀತಿಯಲ್ಲಿ ಬರೆದಿದ್ದಾರೆ. ಇದೇ ಅವರ ಸಾಹಿತ್ಯತತ್ತ್ವ ಒಂದನ್ನು ಸಮಗ್ರವಾಗಿ ಗ್ರಹಿಸಿ ಬೇರೆ ಬೇರೆ ರೂಪಗಳಲ್ಲಿ ಕೊಟ್ಟಿರಬಹುದು ಏನಿಸುತ್ತದೆ. ಉದಾ: ಕಾದಂಬರಿಕತೆ

ಮತ್ತು ಕವಿತೆಗಳಲ್ಲಿ ಬರುವ ಪಾತ್ರಗಳು ಬೇರೆಬೇರೆಯಾಗಿ ಕಾಣುವುದಿಲ್ಲ. ಕವಿತೆಯಲ್ಲೂ ಸಣ್ಣ ಭೈರನಾಗಿ ಬರುತ್ತಾರೆ. ನಾಗಮ್ಮ ಕಾದಂಬರಿಯಲ್ಲೂ ಬರುತ್ತಾರೆ. 'ಯಾರು ಅರಿಯದ ವೀರಕಥೆಯಲ್ಲೂ ಬರುವ ಲಿಂಗ ಮನೆ ಆಳು, ಕಾದಂಬರಿಯಲ್ಲಿ ಬರುವ ಗುತ್ತಿ ಮನೆ ಆಳು ಅಲ್ಲೆಲ್ಲೋ ಒಂದು ಕಡೆ ಲಿಂಗ ಬೇರೆಯಲ್ಲ, ಗುತ್ತಿ ಬೇರೆಯಲ್ಲ, ನಾಗ ಬೇರೆಯಲ್ಲ ಎಂದೆನಿಸುತ್ತದೆ. ಹಾಗಾಗಿ ಯಾವುದೋ ಒಂದನ್ನ ಬೇರೆ ಬೇರೆ ರೂಪಗಳಲ್ಲಿ, ಬೇರೆಬೇರೆ ವಿಧದಲ್ಲಿ, ಬೇರೆ ಬೇರೆ ಆಯಾಮದಲ್ಲಿ ಹೇಳುವ ಪ್ರಯತ್ನವನ್ನು ತಮ್ಮ ಸಾಹಿತ್ಯ ಜೀವನದುದ್ದಕ್ಕೂ ಮಾಡಿದ್ದಾರೆ. ಹಾಗಾಗಿ ಕುವೆಂಪು ಅವರ ಸಾಹಿತ್ಯಕ್ಕೆ ಆಯೋಜಿತವಾಗಿ ಒಂದು ಸಮಗ್ರತೆ ಪ್ರಾಪ್ತವಾಗಿದೆ.

### ವೈಚಾರಿಕತೆಯ ವಿಧಗಳು

ವೈಚಾರಿಕತೆ ಎಂಬುದು ವಿಚಾರ ಎಂಬ ಪದದಿಂದ ಬಂದಿದೆ. ವಿಚಾರ ಎಂಬ ಭಾವನಾಮ ವೈಚಾರಿಕತೆ ಎಂಬ ನಿಷ್ಪನ್ನ ಭಾವನಾಮವಾಗಿ ರೂಪುಗೊಳ್ಳುತ್ತದೆ. ವಿಚಾರ, ವೈಚಾರ, ವೈಚಾರಿಕತೆ ಎಂಬ ಪದ ಆಗಿದೆ. ಕಾರ್ಯಕರಣ ಸಂಬಂಧವನ್ನು ಅನ್ವೇಷಿಸಿ ಅದಕ್ಕೊಂದು ರೂಪವನ್ನು ನೀಡಿ, ನಮಗೆ ಸಮಾಧಾನವಾಗುವಂತಹ ವಿವರಣೆಯನ್ನು ವೈಜ್ಞಾನಿಕವಾಗಿ ಕೊಟ್ಟುಕೊಳ್ಳುವುದನ್ನೇ ವೈಚಾರಿಕತೆ ಎನ್ನಲಾಗುವುದು. ಯಾವುದೇ ಒಂದನ್ನು ಆಯಾಚಿತವಾಗಿ ಒಪ್ಪಿಕೊಳ್ಳದೇ ಭಾವನಾತ್ಮಕ ಅಂಶಗಳನ್ನು ಪಕ್ಕಕ್ಕಿಟ್ಟು ವಾಸ್ತ ಮಾಡಿ ನೆಲೆಯಲ್ಲಿ ವಿಚಾರ ಮಾಡಿ ವಿಮರ್ಶೆ ಮಾಡಿ ಒಪ್ಪಿಕೊಳ್ಳುವ ಸತ್ಯವನ್ನು ವೈಚಾರಿಕತೆ ಎನ್ನುವರು. ಮೊತ್ತ ಮೊದಲ ಬಾರಿಗೆ ಗೌತಮ ಬುದ್ಧನನ್ನು ಪ್ರಥಮ ವೈಚಾರಿಕವಾದಿ ಅಥವಾ ವೈಚಾರಿಕ ಸಂತ ಎಂದು ಕರೆಯುತ್ತೇವೆ. ತಾನು ಹೇಳಿದ್ದನ್ನು ವಿಚಾರ ಮಾಡದೇ ಒಪ್ಪಿಕೊಳ್ಳಬೇಡಿ ಎಂದು ಒಪ್ಪುವ ವ್ಯಕ್ತಿಗಳು ವಿಚಾರವಂತರೆಂದು ಕರೆಸಿಕೊಳ್ಳುವುದಿಲ್ಲ. ಅದನ್ನು ಮೌಢ್ಯ ಎನ್ನಬಹುದು. ಮತ್ತೊಬ್ಬರನ್ನು ಹೇಳಿದ್ದನ್ನು ಪ್ರಶ್ನಿಸದೇ, ಸಮ್ಮತವೇ ವಿಚಾರ ಮಾಡದೆ, ವಾಸ್ತವ ಸತ್ಯವೇ ಎಂದು ತಿಳಿಯದೇ ಒಪ್ಪುವುದು ವೈಚಾರಿಕತೆ ಎನಿಸುವುದಿಲ್ಲ ಯಾವುದು ವೈಚಾರಿಕವಲ್ಲ ಎಂಬುದನ್ನು ಗುರುತಿಸಿಗದಾಷ್ಟೇ ನಮಗೆ ಯಾವುದು ವೈಚಾರಿಕತೆ ಎಂಬುದು ಅರಿವಾಗುತ್ತದೆ. ಹಾಗಾಗಿ ವೈಚಾರಿಕತೆಯಲ್ಲಿ ಅನೇಕ ವಿಧಗಳನ್ನು ಕಾಣಬಹುದು. ಅವುಗಳೆಂದರೆ;

1. ಪಾರಂಪರಿಕ ವೈಚಾರಿಕತೆ
2. ದಾರ್ಶನಿಕ ವೈಚಾರಿಕತೆ
3. ವಾಸ್ತವವಾದಿ ವೈಚಾರಿಕತೆ
4. ಕಾರಣವಾದಿ ವೈಚಾರಿಕತೆ
5. ವೈಜ್ಞಾನಿಕ ವೈಚಾರಿಕತೆ
6. ನಾಸ್ತಿಕ ವೈಚಾರಿಕತೆ

ಇಲ್ಲಿ ಕುವೆಂಪು ಅವರದು ಯಾವುದನ್ನು ನಿರಾಕರಿಸಿದ ಎಲ್ಲ ಪರಂಪರೆಗಳಿಂದ ಒಳ್ಳೆಯದನ್ನು ಸ್ವೀಕರಿಸುವ ದಾರ್ಶನಿಕ ವೈಚಾರಿಕತೆ. ಉದಾ: ವೇದಗಳಲ್ಲಿ, ಉಪನಿಷತ್ತುಗಳಲ್ಲಿ, ಪುರಾಣಗಳಲ್ಲಿ ನಮ್ಮ ಪರಂಪರೆಯಿಂದ ಎಷ್ಟನ್ನು ತೆಗೆದುಕೊಳ್ಳಬೇಕೋ ಅಷ್ಟನ್ನು ತೆಗೆದುಕೊಂಡು ತಮ್ಮ ಸಾಹಿತ್ಯದಲ್ಲಿ ಅಳವಡಿಸಿಕೊಂಡಿರುವುದೇ ದಾರ್ಶನಿಕ ವೈಚಾರಿಕತೆಯಾಗಿದೆ ಎನ್ನುವುದಕ್ಕೆ ನಿದರ್ಶನ ಶಿವರಾಮಕಾರಂತ ಅವರದು ವಾಸ್ತವವಾದಿ ವೈಚಾರಿಕತೆ. ಕುವೆಂಪು ಮತ್ತು ಕಾರಂತರ ವೈಚಾರಿಕತೆಗೆ ಬಹಳ ವ್ಯತ್ಯಾಸವಿದೆ. ವೈಚಾರಿಕತೆ ಎಂದ ಮಾತ್ರಕ್ಕೆ ಅದು ಸಂಪೂರ್ಣ ಒಂದೇ ಎನ್ನುವ ದೃಷ್ಟಿಕೋನವನ್ನು ನಾವು ಬಿಡಬೇಕು ಇಷ್ಟಕ್ಕು ವೈಚಾರಿಕತೆ ಎಂದರೆ ವಿರೋಧಿಸುವುದು, ಬುದ್ಧಿಜೀವಿಗಳಂತೆ ಎಲ್ಲವನ್ನು ಖಂಡಿಸುವುದು, ನಿರಾಕರಿಸುವುದು ವೈಚಾರಿಕತೆಯಲ್ಲ. ಪರ್ಯಾಯವನ್ನು ಕಟ್ಟಿಕೊಡುವುದು ನಿಜವಾದ ವೈಚಾರಿಕತೆ. ಉದಾ: ದೇವರನ್ನು ಪಕ್ಕಕ್ಕೆ ಸರಿಸಿ ಪ್ರಕೃತಿಯನ್ನು ಪ್ರತಿಷ್ಠಾಪನೆ ಮಾಡಿದ್ದು ಕುವೆಂಪು ಅವರ ವೈಚಾರಿಕತೆ "ಪ್ರಕೃತಿಯಾರಾಧನೆಯೇಪರಮನಾರಾಧನೆ, ಆತನೊಳ್ ಮುಕ್ತಿಯ ಸಾಧನೆ" ಎಂಬ ಮಾತೇ ಅವರ ವೈಚಾರಿಕತೆಗೆ ದೊಡ್ಡ ಉದಾಹರಣೆ ಕುವೆಂಪು ಅವರು ಧರ್ಮವನ್ನು ಆಧ್ಯಾತ್ಮವನ್ನು ನಿರಾಕರಿಸಿದೆ, ತಮ್ಮ ವಿಶ್ವಮಾನವ ತತ್ತ್ವದೊಳಗಡೆ ತೆಗೆದುಕೊಂಡು ಬಂದಿದ್ದಾರೆ. ಆಧ್ಯಾತ್ಮವೇ ವಿಜ್ಞಾನವಾಗಬೇಕು ಎಂದು ಹೇಳುತ್ತಾರೆ. ಆಧ್ಯಾತ್ಮವೇ ಎಲ್ಲರ ಮತವಾಗಬೇಕು ಅಂತ ಹೇಳುತ್ತಾರೆ. ಅಂದರೆ ಕುವೆಂಪು ಅವರು ವೈಜ್ಞಾನಿಕ ಅಥವಾ ವಾಸ್ತವಿಕ ವೈಚಾರಿಕರಂತೆ ಮಾತನಾಡದೆ ನಿರಕಾರಿಸದೆ, ಜನಸಾಮಾನ್ಯರನ್ನು ದಿಕ್ಕು ತಪ್ಪಿಸದೇ, ಅವರನ್ನು ಗೊಂದಲಕ್ಕಿಡು ಮಾಡದೇ ಪರ್ಯಾಯವನ್ನು ಕೊಡುವುದರ ಮೂಲಕ ಸಕಾರಾತ್ಮಕ ಚಿಂತನೆಗೆ ನೆರವಾಗುತ್ತಾರೆ. ಹಾಗಾಗಿ ಕುವೆಂಪು ಅವರ ವೈಚಾರಿಕತೆ ಸಕಾರಾತ್ಮಕ ನೆಲೆಯದ್ದು, ದೂರದೃಷ್ಟಿಯಾದದ್ದು, ಸರ್ವಜನ ಉಪಕಾರಿಯಾದದ್ದು ಹಾಗೂ ವಿಚಾರ ಮಾಡಿ ಒಪ್ಪಿಕೊಳ್ಳಬೇಕಾದ ತೀರ್ಮಾನಗಳು. ಇದು ಇವರ ವೈಚಾರಿಕತೆಯ ಸ್ವರೂಪ. ಹಾಗಾಗಿ ಇಲ್ಲಿ ಹಲವಾರು ವೈಚಾರಿಕತೆಗಳಿದ್ದು ಅದರಲ್ಲಿ ಕುವೆಂಪು ಅವರದ್ದು ದಾರ್ಶನಿಕ ವೈಚಾರಿಕತೆ ಎಂದು ಹೇಳಲು ಇಚ್ಛಿಸುತ್ತೇವೆ.

**ಕುವೆಂಪು ಸಾಹಿತ್ಯದಲ್ಲಿ ನಾಟಕಗಳ ಹಿನ್ನೆಲೆ**

ಕುವೆಂಪು ಓದುಗನ ಮನೋರಂಗಭೂಮಿಯಲ್ಲಿ ಯಥಾಶಕ್ತಿಗನುಗುಣವಾಗಿ ಪಾತ್ರಗಳು ಮೈದಾಳಬೇಕು, ನಾಟ್ಯವಾಡಬೇಕು. ಓದುಗನ ಕಲ್ಪನೆಗೆ ಬಿಡಬೇಕು ಎಂಬುವಂತಹ ತತ್ತ್ವವನ್ನು ಕುವೆಂಪು ನಂಬಿದ್ದವರು. ಅವರಿಗೆ ರಂಗಪ್ರಯೋಗಗಳಲ್ಲಿ ನಂಬಿಕೆ ಇದ್ದಂತಿರಲಿಲ್ಲ. ಓದುಗನ ಮನೋರಂಗಭೂಮಿಯಲ್ಲಿ ಪಾತ್ರಗಳು ಮೈದಾಳಬೇಕೇ ವಿನಃ ಯಕಶ್ಚಿತ್ ಸಾಮಾನ್ಯವಾದ ಮನುಷ್ಯ ಕೃತ ರಂಗಭೂಮಿಗಳಲ್ಲಿ ನನ್ನ ನಾಟಕಗಳನ್ನು ಪ್ರಯೋಗಿಸುವವರಿಗೆ ಕಷ್ಟವಾದೀತು ಎಂದು ಅವರು ತಮ್ಮ 'ಸ್ಮಶಾನ ಕುರುಕ್ಷೇತ್ರಂ' ಎಂಬ ನಾಟಕದ ಮುನ್ನುಡಿಯಲ್ಲಿ ಹೇಳಿಕೊಂಡಿದ್ದಾರೆ. ಅಂದರೆ ಕುವೆಂಪು ಅವರ

ಎಲ್ಲಾ ಸಾಹಿತ್ಯ ಪ್ರಕಾರದಲ್ಲೂ ಸಾಹಿತ್ಯ ರಚಿಸುವಂತೆ ನಾಟಕಗಳನ್ನು ರಚಿಸಿದ್ದಾರೆ. ಆದರೆ ಅವರು ನಾಟಕಗಳಲ್ಲಿಯೂ ಕಾವ್ಯವನ್ನು ತಂದವರು. ಸಾಮಾಜಿಕ ನಾಟಕಗಳ ರೀತಿಯಲ್ಲಿ ಗದ್ಯದಲ್ಲಿ ನಾಟಕಗಳನ್ನು ಬರೆದವರಲ್ಲ. ಕುವೆಂಪು ಅವರ ನಾಟಕಗಳಲ್ಲಿ ಗದ್ಯವೂ ಪ್ರಸಾರವಾಗುತ್ತೆ, ತತ್ತ್ವವೂ ಬರುತ್ತದೆ. ಜೊತೆಗೆ ಒಂದು ದರ್ಶನ ಧ್ವನಿ ವ್ಯಕ್ತವಾಗುತ್ತದೆ. ಅವರ ಜನಪ್ರಿಯ ನಾಟಕಗಳಲ್ಲಿ ಬೆರಳ್‌ಗೆಕೊರಳ್, ಜಲಗಾರ, ಶೂದ್ರತಪಸ್ವಿ, ಸ್ಮಶಾನ ಕುರುಕ್ಷೇತ್ರಂ, ಚಂದ್ರಹಾಸ, ರಕ್ತಾಕ್ಷಿ ಬಲಿದಾನ ಇವುಗಳು ಕುವೆಂಪು ಅವರ ನಾಟಕಗಳಲ್ಲಿ ಮೇಲ್ಪಂಕ್ತಿಯವು ಮತ್ತು ತಕ್ಷಣಕ್ಕೆ ಹೆಸರೆಳುವಂತವು.

ಒಂದೊಂದು ನಾಟಕಗಳಲ್ಲಿ ಒಂದೊಂದು ತತ್ತ್ವವನ್ನು ಪ್ರಸಾರ ಮಾಡಲಾಗಿದೆ. ಜಲಗಾರ ನಾಟಕದಲ್ಲಿ ಜಗದಜಲಗಾರನಾಗಿ ಶಿವನನ್ನು ತರುತ್ತಾರೆ. ಕಾಯಕವೇ ಕೈಲಾಸ ಎಂಬುದನ್ನು ಬಹಳ ವಿಭಿನ್ನ ರೀತಿಯಲ್ಲಿ ಅದು ಇಲ್ಲಿ ವ್ಯಕ್ತವಾಗಿದೆ. 'ಊರ ಜಲಗಾರ ನೀನು, ಜಗದ ಜಲಗಾರ ನಾನು' ಎಂದು ಶಿವನೇ ಜಲಗಾರನ ಬಳಿಬರುವ ದೃಶ್ಯದ ಮೂಲಕ ಆ ಕಾಲಕ್ಕೆ ಕ್ರಾಂತಿಯನ್ನು ಉಂಟುಮಾಡುತ್ತಾರೆ. ಪರೋಕ್ಷವಾಗಿ ಕಾಯಕವೇ ಕೈಲಾಸ ಎಂಬ ಬಸವಣ್ಣ ಅವರ ತತ್ತ್ವಕ್ಕೆ ಅಕ್ಷರ ರೂಪವನ್ನು ಕೊಟ್ಟ ಖ್ಯಾತಿ ಜಲಗಾರ ನಾಟಕದ್ದಾಗಿದೆ. ಶೂದ್ರತಪಸ್ವಿ ನಾಟಕವು ಇತಿಹಾಸದಲ್ಲಿ ನಡೆದಿರುವ ಅಪ್ರಚಾರಗಳನ್ನು ಸರಿಪಡಿಸುವ ಸಕಾರಾತ್ಮಕ ಧೋರಣೆಯಿಂದ ರಚಿತವಾದದ್ದು. ವಾಲ್ಮೀಕಿಯು ಭವಿಷ್ಯಹ ಹಾಗೇ ಬರೆದಿಲಾರ ಹಾಗೆ ಬರೆದಿದ್ದರೆ ಅವನು ಅಪರಾಧಿಯೇ? ಎನ್ನುವ ಧ್ವನಿಯಲ್ಲಿ ಕುವೆಂಪು ಶೂದ್ರತಪಸ್ವಿಯನ್ನು ಬರೆಯುತ್ತಾರೆ. ಒಬ್ಬ ಬ್ರಾಹ್ಮಣನ ಮಗನ ಸಾವಿಗೆ ಶೂದ್ರನು ತಪಸ್ಸು ಮಾಡಿದ್ದೇ ಕಾರಣ ಎಂಬುದೇ ಒಪ್ಪಿಕೊಳ್ಳಲಾಗದ ಐತಿಹಾಸಿಕ ಸತ್ಯ. ಇದು ಸಾಧ್ಯವಿಲ್ಲ. ಭವಿಷ್ಯಹ ವಾಲ್ಮೀಕಿ ಇದನ್ನು ಬರೆದಿಲಾರ. ಕಾಲಾನಂತರ ಯಾರೋ ಇದನ್ನು ಈ ಪ್ರಸಂಗವನ್ನು ತಂದು ಸೇರಿಸಿದ್ದರಿಬಹುದು. ಇದು ಪ್ರಕ್ಷಿಪ್ತ ಭಾಗ ಇದನ್ನು ಸರಿಪಡಿಸಬೇಕು ಎಂಬುದನ್ನು ಕುವೆಂಪು ಅವರು ಏಕಕಾಲಕ್ಕೆ ಶೂದ್ರನುತಪಸ್ಸು ಮಾಡುವುದಕ್ಕೆ ಅಧಿಕಾರವುಳ್ಳವನು ಎನ್ನುವ ಸರ್ವಸಮಾನತೆಯ ದೃಷ್ಟಿಯನ್ನು ಸ್ಥಾಪನೆ ಮಾಡುತ್ತಾರೆ. ಜೊತೆಗೆ ರಾಮಚಂದ್ರನ ಉದಾತ್ತ ವ್ಯಕ್ತಿತ್ವಕ್ಕೆ ಕನ್ನಡಿ ಹಿಡಿದು ಸಾಬೀತು ಮಾಡುತ್ತಾರೆ. ಮೂಲ ವಾಲ್ಮೀಕಿಯ ರಾಮಾಯಣದಲ್ಲಿ ಬರುವ ಹಾಗೇ ರಾಮನು ಹಿಂದು ಮುಂದು ನೋಡದೆ ಶಂಭುಕನನ್ನು ಕೊಲ್ಲುವುದಿಲ್ಲ. ಕೊಲ್ಲುವಿಕೆ ಶಾಶ್ವತವಲ್ಲ ಕೊಲ್ಲುವಿಕೆ ಉತ್ತರವಲ್ಲ ಎನ್ನುವುದನ್ನು ಕುವೆಂಪು ಶೂದ್ರತಪಸ್ವಿ ನಾಟಕದಲ್ಲಿ ಸಾಬೀತು ಮಾಡುತ್ತಾರೆ.

ಸಶ್ಮಾನ ಕುರುಕ್ಷೇತ್ರಂ ನಾಟಕದಲ್ಲಿ ದ್ವಾಪರಯುಗ, ಕಲಿಯುಗಗಳನ್ನು ಬೆಸೆಯುತ್ತಾರೆ. ಇದು ಮಹಾಭಾರತಕ್ಕೆ ಕೊಟ್ಟ ಸೃಜನಾತ್ಮಕ ಉತ್ತರವೆನಿಸುತ್ತದೆ. ಇದಕ್ಕೆ ಪಂಪ ಮತ್ತು ರನ್ನ ಕುವೆಂಪು ಅವರನ್ನು ಕೈ ಹಿಡಿದು ನಡೆಸಿದ್ದಾರೆ. ದುರ್ಯೋಧನನ ಅವಸಾನದ ಸಂದರ್ಭದಲ್ಲಿ ಉಂಟಾದ ರಣರಂಗದ ಅವಸಾನದ ಚಿತ್ರಣ ವಿರಬಹುದು, ಕರ್ಣನ ಅವಸಾನದ ಸಂದರ್ಭವೂ ಇರಬಹುದು ಇದೆಲ್ಲವೂ

ಕುವೆಂಪು ಅವರನ್ನು ಪ್ರಭಾವಿಸಿದೆ. ಇಲ್ಲಿ ಅಹಿಂಸೆಯ ತತ್ತ್ವ ಕುವೆಂಪು ಅವರಿಗೆ ತಿಳಿಯದಂತೆ ಮಾಡಿದೆ. ಹಿಂಸೆಯನ್ನು ಬರೆಯುವುದರ ಮೂಲಕ ಅಹಿಂಸೆಯ ಮಹತ್ವವನ್ನು ಪ್ರತಿಪಾದಿಸುತ್ತಾರೆ. ಉದಾಹರಣೆಗೆ ಪಂಪ ಯುದ್ಧವನ್ನು ಕೊಡುವುದರ ಮೂಲಕ ಯುದ್ಧದ ವಿರೋದಿ ನೀತಿಯನ್ನು ಮಾಡಿದ ಹಾಗೆ. ಪ್ರಾಚೀನ ಕವಿಗಳು ಯುದ್ಧವನ್ನು ವರ್ಣಿಸಿ ಬರೆದಿದ್ದಾರೆ. ಅವರು ಯುದ್ಧ ಪ್ರಿಯರು ಎಂದು ಹೇಳುವುದು ತಪ್ಪು ಹೇಳಿಕೆ, ಯುದ್ಧದ ಅನಾಹುತವನ್ನು ಅವರು ಕೊಡುತ್ತಾರೆ ಎಂಬುದನ್ನು ಮರೆಯಬಾರದು. ಹಾಗಾಗಿ ಕುವೆಂಪು ಅವರ ಶ್ಮಶಾನಕುರುಕ್ಷೇತ್ರಂ ನಾಟಕ ವಿರಬಹುದು. ಶೇಕ್ಸ್‌ಪಿಯರ್ ನಂತಹ ಮಹಾಕವಿಗೆ ಕೊಟ್ಟ ಸೃಜನಾತ್ಮಕ ಉತ್ತರ ರಕ್ತಾಕ್ಷಿ, ಅದು ಹ್ಯಾಮ್ಲೆಟ್ ನಾಟಕದ ಅತ್ಯಂತ ಸ್ಪಷ್ಟವಾದ ಕನ್ನಡ ರೂಪವೇ ರಕ್ತಾಕ್ಷಿ. ಬಿರುಗಾಳಿ ಎನ್ನುವುದು ಟೆಂಪೆಸ್ಟ್‌ಗೆ ಕೊಟ್ಟ ಉತ್ತರ. ಅಂದರೆ ಕುವೆಂಪು ಅವರ ನಾಟಕಗಳ ಸ್ವರೂಪ ಏಕಕಾಲಕ್ಕೆ ಐತಿಹಾಸಿಕವೂ ಪೌರಾಣಿಕವೂ, ಸಾಮಾಜಿಕವೂ ಆದುದು.

**ಕುವೆಂಪು ನಾಟಕಗಳಲ್ಲಿ ವೈಚಾರಿಕತೆಯ ಸ್ವರೂಪ**

**1. ವಿಶ್ವಮಾನವ ಸಂದೇಶ**

ಮತ ಧರ್ಮಗಳನ್ನು, ಜಾತಿಯನ್ನು ದೂರವಿಟ್ಟು ಆಧ್ಯಾತ್ಮವನ್ನು ಸ್ವೀಕರಿಸುವ, ವಿಶ್ವಶಕ್ತಿಯನ್ನು ಒಪ್ಪುವ, "ಸರ್ವರಿಗೆ ಸಮಪಾಳು, ಸರ್ವರಿಗೆ ಸಮಬಾಲು" ಎಂದು ನಂಬುವ ಸರ್ವರ ಉದಯವನ್ನು ಅಪೇಕ್ಷಿಸುವ, ಮನುಜಮತ ವಿಶ್ವಪಥವೇ ಸರಿ ಎಂದು ತೀರ್ಮಾನಿಸುವ ಆದರೆ ಎಲ್ಲವನ್ನು ಖಂಡಿಸುವ ವಿಚಾರವಾದಿಯಲ್ಲ. ವಿಚಾರವಾದಿಗಳು ಎಂದಾಕ್ಷಣಾ ನಮಗೆ ಎಲ್ಲವನ್ನು ಖಂಡಿಸುವ, ದೇವರು–ಧರ್ಮವನ್ನು ನಿರಾಕರಿಸುವ, ಪ್ರಾಚೀನ ಪರಂಪರೆಯನ್ನು ಗುಡಿಸಿ ಎಸೆಯುವ ವ್ಯಕ್ತಿಗಳಂತೆ ಕಂಡುಬರುತ್ತಾರೆ. ಆದರೆ ಕುವೆಂಪು ಅಂತಹ ವರ್ಗಕ್ಕೆ ಸೇರಿದವರಲ್ಲ. ಅವರು ಪರಂಪರೆಯಿಂದ ಎಷ್ಟನ್ನು ತೆಗೆದುಕೊಳ್ಳಬೇಕೋ ಅಷ್ಟನ್ನು ಮಾತ್ರ ತೆಗೆದುಕೊಂಡು ಈ ಕಾಲಕ್ಕೆ ಬಗ್ಗಿಸಿಕೊಳ್ಳುವ ಚಾತುರ್ಯವನ್ನು ಮೆರೆದವರು. ಅವರೇ ಹೇಳಿದಂತೆ ಹಳೆಯ ಕಾಲದ ಒಡವೆಗಳನ್ನು ಹಳೆಯದೆಂದು ಬಿಸಾಡುವುದು ಮೂರ್ಖತನವಾಗುತ್ತದೆ; ಅವುಗಳನ್ನು ಕರಗಿಸಿ ಇಂದಿನ ಅಭಿರುಚಿಗೆ ತಕ್ಕಂತೆ ಬೇರೆ ಆಭರಣಗಳನ್ನು ತಯಾರಿಸಬೇಕು. ಏಕೆಂದರೆ ಚಿನ್ನಕ್ಕೆ ಎಂದಿಗೂ ಎಲ್ಲಿಯೂ ಬೆಲೆಯುಂಟು, ಹಾಗಾಗಿ ಹಳೆಯ ಕತೆಯನ್ನು ವಿಕೃತಿಗೊಳಿಸುವ ಪ್ರವೃತ್ತಿ ಕುವೆಂಪು ಅವರದ್ದಲ್ಲ. ಹಳೆಯ ತತ್ತ್ವ ಸಿದ್ಧಾಂತಗಳನ್ನು ಹೊಸ ಕಾಲಕ್ಕೆ ಉಜ್ಜಿ ಓರೆ ಹಚ್ಚಿ ಎಷ್ಟನ್ನು ಬೇಕೋ ಅಷ್ಟನ್ನು ತೆಗೆದುಕೊಳ್ಳಬೇಕು ಎನ್ನುವ ಪಂಥದವರು. ಹಾಗಾಗಿ ಕುವೆಂಪು ಅವರ ನಾಟಕಗಳ ವೈಚಾರಿಕತೆ ಪ್ರಧಾನವಾಗಿ ಅವರು ಬದುಕಿನುದ್ದಕ್ಕೂ ಪ್ರತಿಪಾದಿಸಿದ ವಿಶ್ವಮಾನವ ತತ್ತ್ವಕ್ಕೆ ಹಿಡಿದ ಕನ್ನಡಿ. ಒಬ್ಬ ಏಕಲವ್ಯ, ಒಬ್ಬ ಶಂಭೂಕ ಕುವೆಂಪು ಅವರ ನಾಟಕಗಳಲ್ಲಿ ಕಥಾನಾಯರಾಗುತ್ತಾರೆ. ಅಸಾಮಾನ್ಯ ವ್ಯಕ್ತಿತ್ವಗಳನ್ನು, ಉದಾತ್ತ ವ್ಯಕ್ತಿತ್ವಗಳನ್ನು ಚಿತ್ರಿಸುವಾಗ ಬಹಳವಾಗಿ ರಾಜ ಮಹಾರಾಜರುಗಳನ್ನು ತೆಗೆದುಕೊಳ್ಳಬೇಕು ಎಂಬುದು ಕುವೆಂಪು ಅವರ ವೈಚಾರಿಕತೆಯಲ್ಲಿ ಕಾರಣ

ಸರ್ವರ ಉದಯ ಮತ್ತು ಸಾಮಾನ್ಯರ ಆತ್ಮಕ್ಕೆ ಗೌರವವನ್ನು ಕೊಡವ ದಾರಿಯೇ ಅವರ ವೈಚಾರಿಕತೆ. ಹಾಗಾಗಿ ವಿಶ್ವಮಾನವ ತತ್ತ್ವದ ಎಲ್ಲಾ ಸೆಳಹುಗಳನ್ನು ನಾಟಕಗಳಲ್ಲಿ ಪಾತ್ರಗಳ ಮೂಲಕ ಆಗು ಮಾಡಿಸಿದ್ದಾರೆ.

**ಪಂಚಮಂತ್ರಗಳು**

ಸರ್ವೋದಯ, ಸಮನ್ವಯ, ಪೂರ್ಣದೃಷ್ಟಿ, ಮನುಜಮತ, ವಿಶ್ವಪಥ, ಈ ಐದು ಪಂಚಮತ್ರಗಳಾಗಿವೆ. ಈ ಪಂಚಮಂತ್ರಗಳನ್ನು ಕುವೆಂಪು ಅವರು ಅರವಿಂದಘೋಷ ಅವರ ತತ್ತ್ವಗಳಿಂದ, ರಮಣರಿಂದ, ರಾಮಕೃಷ್ಣ ಪರಮಹಂಸರಿಂದ, ವಿವೇಕಾನಂದರಿಂದ ಪಡೆದಿದ್ದಾರೆ. ಪಂಚಮಂತ್ರಗಳನ್ನು ಕುವೆಂಪು ತಮ್ಮ ಕವಿತೆಗಳಲ್ಲಿ ಪ್ರಸಾರ ಮತ್ತು ಪ್ರತಿಪಾದನೆ ಮಾಡಿದ್ದಾರೆ. ಪಂಚಮಂತ್ರಗಳಿಂದ ವಿಶ್ವಮಾನವ ತತ್ತ್ವಗಳನ್ನು ಪ್ರಾಯೋಗಿಕವಾಗಿ ಜಾರಿಗೆ ತರುವುದಕ್ಕೆ ಸಹಾಯವಾಗುತ್ತದೆ ಎಂಬುದು ಕುವೆಂಪು ಅವರ ಮಾತು. ಗಾಂಧೀಜಿ ಅವರಿಂದ ಸರ್ವೋದಯವನ್ನು, ಅರವಿಂದರಿಂದ ಪೂರ್ಣದೃಷ್ಟಿ, ವಿವೇಕಾನಂದರಿಂದ ಮನುಜಮಥ ವಿಶ್ವಪಥವನ್ನು ತೆಗೆದುಕೊಳ್ಳುತ್ತಾರೆ. ಹೀಗೆ ಬೇರೆ ಬೇರೆ ಭಾರತೀಯ ವಿಚಾರವಂತ ಸಂತರು, ಜಗದ್ಗುರುಗಳು ಹಾಗೂ ದಾರ್ಶನಿಕರಿಂದ ಕುವೆಂಪು ಅವರ ವೈಚಾರಿಕ ಸ್ವರೂಪ ನಿರ್ಧಾರವಾಗಿ ಅವರು ತಮ್ಮ ನಾಟಕಗಳಲ್ಲಿ ತತ್ತ್ವಗಳಾಗಿ ಪ್ರತಿಪಾದಿಸುತ್ತಾರೆ. ಉದಾಹರಣೆಗೆ ಬೆರಳ್‌ಗೆ ಕೊರಳ್ ನಾಟಕದಲ್ಲಿ ಬರುವ ಮೂರು ದೃಶ್ಯಗಳಿಗೆ ಮೂರು ಹೆಸರನ್ನು ಕೊಟ್ಟಿರುವುದು. ಗುರು, ಕರ್ಮ, ಯಜ್ಞ ಹೀಗೆ ಮೂರು ದೃಶ್ಯಗಳಿಗೆ ಶೀರ್ಷಿಕೆಗಳನ್ನು ನೀಡುತ್ತಾರೆ. ಭವಿಷ್ಯಹ ಮೊದಲ ಬಾರಿಗೆ ನಾಟಕಗಳಿಗೂ ಶೀರ್ಷಿಕೆಗಳನ್ನು ಇಟ್ಟಿರುವ ಏಕೈಕ ನಾಟಕಗಾರ. ಅಂದರೆ ಗುರುದೃಶ್ಯದಲ್ಲಿ ದ್ರೋಣನ ತೊಳಲಾಟ ಬರುತ್ತದೆ. ಕರ್ಮದೃಶ್ಯದಲ್ಲಿ ಏಕಲವ್ಯ ಬೆರಳನ್ನು ಬಲಿ ಕೊಡುವ ದೃಶ್ಯ ಬರುತ್ತದೆ. ಯಜ್ಞದೃಶ್ಯದಲ್ಲಿ ಏಕಲವ್ಯನ ತಾಯಿಯ ಶಾಪಕ್ಕೋಸ್ಕರ ದ್ರೋಣನು ಕೊರಳನ್ನು ಕೊಡಬೇಕಾಗಿ ಬಂತು ಎನ್ನುವ ಪರಿಣಾಮಕಾರಿ ಚಿಂತನೆ ಬರುತ್ತದೆ. ಇದೆಲ್ಲವೂ ಕುವೆಂಪು ನಾಟಕದಲ್ಲಿ ಕಂಡುಬರುವ ವೈಚಾರಿಕ ಸ್ವರೂಪ ಮತ್ತು ಪಂಚಮಂತ್ರಗಳ ನಿದರ್ಶನ. ಜಲಗಾರ ನಾಟಕದಲ್ಲಿ ಕೇಂದ್ರ ಸ್ಥಾನ ಅಥವಾ ನಾಯಕ ಸ್ಥಾನದಲ್ಲಿ ಜಲಗಾರನನ್ನು ತಂದಿರುವುದೇ ಪಂಚಮಂತ್ರಕ್ಕೆ ಉದಾಹರಣೆ.

ಒಟ್ಟಾರೆ ಕುವೆಂಪು ಅವರ ನಾಟಕಗಳಲ್ಲಿನ ವೈಚಾರಿಕತೆ ದಾರ್ಶನಿಕ ವೈಚಾರಿಕತೆ. ಕುವೆಂಪು ಅವರು ತಮ್ಮ ಸಾಹಿತ್ಯದಲ್ಲಿ ಪ್ರತಿಪಾದಿಸಿದ ದರ್ಶನವನ್ನು ನಾಟಕಗಳಲ್ಲಿಯೂ ಪ್ರತಿಪಾದಿಸಿದ್ದಾರೆ. ಅವರ ಕಾವ್ಯದಲ್ಲಿ ಬಂದಿರುವಷ್ಟೇ ಸಹಜವಾಗಿ ಹಾಗೂ ಸರಳವಾಗಿ ನಾಟಕಗಲ್ಲಿಯೂ ಬಂದಿದೆ. ಕುವೆಂಪು ಅವರ ದರ್ಶನ ಬೇರೆಯಲ್ಲ, ಕುವೆಂಪು ಅವರ ವೈಚಾರಿಕತೆ ಬೇರೆಯಲ್ಲ, ಎಂಬಷ್ಟರ ಮಟ್ಟಿಗೆ ಇವರ ನಾಟಕಗಳಲ್ಲಿ ವೈಚಾರಿಕತೆ ಒಡಮೂಡಿದೆ. ಕುವೆಂಪು ನಾಟಕಗಳು ಓದುವುದಕ್ಕೆ ಕಷ್ಟ, ಅವರ ಭಾಷೆ ಕ್ಲಿಷ್ಟ ಎನ್ನುವುದು ತಪ್ಪು. ಅವರು ತಮ್ಮದೇ ಆದ ಭಾಷೆಯನ್ನು ರೂಪಿಸಿಕೊಂಡಿದ್ದಾರೆ. ಹಳಗನ್ನಡ, ಸಂಸ್ಕೃತ,

ಹೊಸಗನ್ನಡ, ಅಚ್ಚಗನ್ನಡ ಎಲ್ಲವನ್ನು ಸೇರಿಸಿಕೊಂಡು ತಮ್ಮದೇ ಆದ ಕುವೆಂಪು ಶೈಲಿಯನ್ನು ಸಿದ್ಧಿಸಿಕೊಂಡಿದ್ದರು. ಆ ಶೈಲಿಯಿಂದಾಗಿಯೇ ಕೆಲವರಿಗೆ ಕಷ್ಟ. ಆದರೆ ಅವರ ತತ್ತ್ವಗಳು ಅವರ ಭಾಷೆಗಿಂತಲೂ ನಾಟಕದಲ್ಲಿ ಸ್ಪಷ್ಟವಾಗಿದೆ ಪ್ರಮುಖವಾದ ಸದುದ್ದೇಶಗಳನ್ನು ಇಟ್ಟುಕೊಂಡು ನಾಟಕವನ್ನು ರಚಿಸಿದ್ದಾರೆ ಎಂಬುದು ಮೇಲ್ನೋಟಕ್ಕೆ ಸಾಬೀತಾವಾಗುತ್ತದೆ. ಇವರು ಮನರಂಜನೆಗಾಗಿ ನಾಟಕವನ್ನು ಬರೆದವರಲ್ಲ, ಪ್ರಮುಖವಾದ ತತ್ತ್ವವನ್ನು ಜನಮಾನಸಕ್ಕೆ ತಲುಪಿಸುವುದಕ್ಕಾಗಿಯೇ ನಾಟಕವನ್ನು ಬರೆದವರು. ಹೀಗೆ ನಾಟಕ ಬರೆಯುವಾಗ ಒಬ್ಬ ವ್ಯಕ್ತಿಯಿಂದಲೋ, ಸಂದರ್ಭ ಸನ್ನಿವೇಶದಿಂದಲೋ, ಘಟನೆಯಿಂದಲೋ ದಾರ್ಶನಿಕ ತತ್ತ್ವವನ್ನು ವಿವರಿಸುತ್ತಾರೆ. ಹಾಗಾಗಿಯೇ ಕುವೆಂಪು ಅವರ ನಾಟಕ ಅಧ್ಯಯನ ಯೋಗ್ಯ, ವಿಚಾರಯೋಗ್ಯ ಮತ್ತು ಎಲ್ಲ ಕಾಲಕ್ಕೂ ಸಾರ್ವಕಾಲಿಕವಾಗಿ, ಸಾರ್ವತ್ರಿಕವಾಗಿ ಸಲ್ಲುವ ಕಾಲಾತೀತ ನಾಟಕಗಳೆನಿಸುತ್ತವೆ.

## ಪರಾಮರ್ಶನ ಗ್ರಂಥಗಳು


1. ಮರುಳ ಸಿದ್ದಪ್ಪ.ಕೆ.–ಆಧುನಿಕ ಕನ್ನಡ ನಾಟಕ:ಲಿಪಿ ಪ್ರಕಾಶನ ಬೆಂಗಳೂರು.1993
2. ವಸಂತಕುಮಾರ.ಎಂ.ಸಿ.– ಕುವೆಂಪು ಅವರ ನಾಟಕಗಳು : ಒಂದು ಅಧ್ಯಯನ ಪಂಪ ಪ್ರಕಾಶನ, ಮೈಸೂರು,1995.
3. ನರಹಳ್ಳಿ ಬಾಲಸುಬ್ರಹ್ಮಣ್ಯ– ಕುವೆಂಪು ನಾಟಕಗಳ ಅಧ್ಯಯನ, ಅಂಕಿತ ಪ್ರಕಾಶನ ಬೆಂಗಳೂರು,2002.
4. ಎಚ್.ತಿಪ್ಪೆರುದ್ರಸ್ವಾಮಿ–ಕುವೆಂಪು ಅವರ ನಾಟಕಗಳು, ಗೀತಾ ಬುಕ್‌ಹೌಸ್ ಮೈಸೂರು, 1969